INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-7, Issue -3, May--June, 2025
PageNo,23-26
Peer -Reviewed, Refereed Journal

# ಎಚ್.ಎಸ್.ಗೋಪಾಲರಾವ್ ಅವರ 'ಕರ್ನಾಟಕ ಏಕೀಕರಣ ಇತಿಹಾಸ'

*ಸುಜಾತ.ಬಿ.[1]
**ಪ್ರೊ.ಎಂ.ಜಿ. ಮಂಜುನಾಥ.[2]

೧೯೯೬ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ಪಡೆದ ಕರ್ನಾಟಕ ಏಕೀಕರಣದ ಇತಿಹಾಸವನ್ನು ತಿಳಿಸುವ ಇತಿಹಾಸ ಕೃತಿ 'ಕರ್ನಾಟಕ ಏಕೀಕರಣ ಇತಿಹಾಸ'. ಇದರ ಇತಿಹಾಸವನ್ನು ತಿಳಿಯಬಯಸುವವರಿಗೆ ಅದರ ಸಮಗ್ರ ಚಿತ್ರಣ ನೀಡುವ ಒಂದು ಉತ್ತಮ ಕೃತಿಯ ಕೊರತೆ ಈ ಕೃತಿಯ ಮೂಲಕ ನಿವಾರಣೆ ಆಗಿದೆ. ಇದಕ್ಕೆ ಈ ಕೃತಿಯ ಪ್ರಕಾಶಕರಾದ ನವಕರ್ನಾಟಕ ಪ್ರಕಾಶನ ಸಂಸ್ಥೆಯವರು ಮತ್ತು ರಚನಕಾರರಾದ ಎಚ್.ಎಸ್. ಗೋಪಾಲರಾವ್ ಅವರು ಕಾರಣಕರ್ತರಾಗಿದ್ದಾರೆ. ಇವರ ಅಪಾರ ತಾಳ್ಮೆ ಮತ್ತು ಪರಿಶ್ರಮದ ಅವಶ್ಯಕತೆ ಇದ್ದ ಈ ಯೋಜನೆ ಎಚ್.ಎಸ್.ಜಿ. ಅವರಿಂದಲ್ಲದೆ ಬೇರೆ ಯಾರಿಂದಲೂ ಇಷ್ಟು ಯಶಸ್ವಿಯಾಗಿ ಕೈಗೂಡುತ್ತಿರಲಿಲ್ಲ. ಶ್ರದ್ಧೆ, ಸಂಯಮ ಮತ್ತು ಪರಿಶ್ರಮಗಳಿಗೆ ಹೆಸರಾದ ಎಚ್.ಎಸ್.ಜಿ ಯವರ ಮಹತ್ವದ ಈ ಕೆಲಸವನ್ನು ಸವಾಲಾಗಿ ಸ್ವೀಕರಿಸಿ ಮಾಹಿತಿ ಸಂಗ್ರಹಣೆ, ಬರವಣಿಗೆ, ಸಂಪಾದನೆ, ಪರಿಶೀಲನಾ ಕಾರ್ಯಗಳನ್ನು ಕಾಲಮಿತಿಯೊಳಗೆ ಸಮರ್ಥವಾಗಿ ನಿರ್ವಹಿಸಿ ಈ ಕೃತಿ ಉತ್ಕೃಷ್ಟವಾಗಿ ಮೂಡಿ ಬರಲು ಕಾರಣರಾಗಿದ್ದಾರೆ.

'ಕರ್ನಾಟಕ ಏಕೀಕರಣ ಇತಿಹಾಸ' ಗ್ರಂಥವು ಗೋಪಾಲರಾವ್ ಅವರಿಗೂ ಅದನ್ನು ಪ್ರಕಟಿಸಿರುವ ನವಕರ್ನಾಟಕ ಪ್ರಕಾಶನಕ್ಕೂ ಹೆಚ್ಚಿನ ಪ್ರಶಂಸೆ, ಕೀರ್ತಿ ಮತ್ತು ಗೌರವಗಳನ್ನು ತಂದುಕೊಟ್ಟ ಗ್ರಂಥ ಎಂದರೆ ತಪ್ಪಾಗಲಾರದು. ಈ ಗ್ರಂಥದ ರಚನೆಯ ಹಿಂದಿರುವ ಪರಿಶ್ರಮ ಅಪರಿಮಿತ. "ಗೋಪಾಲರಾಯರು ಮತ್ತು ಸಂಪಾದಕ ಮಂಡಳಿಯ ಸದಸ್ಯರು ಒಟ್ಟಾಗಿ ಈ ಯೋಜನೆಯ ಭಾಗವಾಗಿ ನಡೆಸಿರುವ ಹಲವು ಸಭೆಗಳು, ಚರ್ಚೆಗಳು, ಪ್ರವಾಸಗಳು, ಸಂದರ್ಶನಗಳು, ಪರಾಮರ್ಶಿಸಿದ ಆಕರಗಳು. ಈ ಕೃತಿಗಾಗಿಯೇ ರಚಿಸಿದ ಹೋರಾಟಗಾರರ ರೇಖಾಚಿತ್ರಗಳು–ಇವೆಲ್ಲವನ್ನೂ ಈಗ ಗಮನಿಸಿದರೆ ಅಚ್ಚರಿ ಮೂಡುವುದು ಸಹಜ. ಗೋಪಾಲರಾಯರಂಥ ಶಿಸ್ತಿನ ಸಿಪಾಯಿ ನಮಗೆ ಆ ಸಂದರ್ಭದಲ್ಲಿ ಸಿಗದಿದ್ದರೆ

1.ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,ಮಾನಸ ಗಂಗೋತ್ರಿ, ಮೈಸೂರು
2.ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ಹಾಸನ, ಮೈಸೂರು ವಿಶ್ವವಿದ್ಯಾನಿಲಯ.

ಇಂತಹ ಮಹಾನ್ ಗ್ರಂಥ ನವಕರ್ನಾಟಕದಿಂದ ರಚನೆ ಆಗುತ್ತಿರಲಿಲ್ಲ."[೧] ಎಂದು ನವಕರ್ನಾಟಕ ಪ್ರಕಾಶನದ ಪರವಾಗಿ ಸಿ.ಆರ್. ಕೃಷ್ಣರಾವ್, ಎ. ರಮೇಶ ಉಡುಪ ಅವರು ಹೇಳಿರುವ ಮಾತುಗಳು ಈ ಕೃತಿ ರಚನೆಯ ಹಿಂದಿನ ಪರಿಶ್ರಮವನ್ನು ಬಿಚ್ಚಿಡುತ್ತವೆ.[೨] ಒಂದು ವರ್ಷಗಳ ಅವಧಿಯಲ್ಲಿ ರಚಿಸಬೇಕೆಂದು ಯೋಜಿಸಿದ್ದ ಈ ಕೃತಿ ರಚನೆಗೆ ಮೂರು ವರ್ಷಗಳು ಬೇಕಾಯಿತು ಎಂದರೆ ಈ ಕೃತಿಯ ವ್ಯಾಪ್ತಿ ಮತ್ತು ಮಹತ್ವ ಎಷ್ಟೆಂಬುದರ ಅರಿವಾಗುತ್ತದೆ.

ಇಂತಹ ವಿಶಿಷ್ಠ ಕೃತಿ ಕರ್ನಾಟಕ ಏಕೀಕರಣಗೊಂಡ ನಲವತ್ತನೆಯ ವರ್ಷವಾದ ೧೯೯೬ರ ನವೆಂಬರ್ ೧ರಂದು ಏಕೀಕೃತ ಕರ್ನಾಟಕದ ಮೊದಲ ಮುಖ್ಯಮಂತ್ರಿಗಳೂ ಹಾಗೂ ಕರ್ನಾಟಕ ಏಕೀಕರಣದಲ್ಲಿ ಪ್ರಮುಖ ಪಾತ್ರವಹಿಸಿದ್ಧ ಎಸ್.ನಿಜಲಿಂಗಪ್ಪ ಅವರ ಅಧ್ಯಕ್ಷತೆಯಲ್ಲಿ ಲೋಕಾರ್ಪಣೆಗೊಂಡಿತು. "ಈ ಕೃತಿಯು ಅಧಿಕೃತವೂ, ಸಂಶೋಧನಾತ್ಮಕವೂ, ಸಮಗ್ರವೂ ಒಳನೋಟಗಳಿಂದ ಕೂಡಿದುದೂ ಆಗಿದ್ದು ಅಪಾರವಾದ ಜನಮನ್ನಣೆಯನ್ನು ಗಳಿಸಿದೆ. ಇದುವರೆಗೂ ಏಳು ಮುದ್ರಣಗಳನ್ನು ಕಂಡಿರುವುದೇ ಅದರ ಜನಪ್ರಿಯತೆಗೆ ಸಾಕ್ಷಿಯಾಗಿದೆ."[೩]

ಒಟ್ಟು ೧೩ ಅಧ್ಯಾಯಗಳಲ್ಲಿ ವ್ಯಾಪಿಸಿರುವ ಈ ಕೃತಿ ಕರ್ನಾಟಕ ಏಕೀಕರಣದ ಇತಿಹಾಸದ ಬಗ್ಗೆ ತಿಳಿಯಲು ಅಧಿಕೃತ ಆಕರ ಕೃತಿ ಎನ್ನಬಹುದು. "ಕರ್ನಾಟಕ ಏಕೀಕರಣ ಚಳವಳಿ ಕುರಿತಾದ ದೃಶ್ಯ ಪ್ರಾತ್ಯಕ್ಷಿಕೆಯ ನಿರ್ಮಿತಿ ಸಂದರ್ಭದಲ್ಲಿ ನವಕರ್ನಾಟಕ ಪ್ರಕಟಣಾಲಯವು ಹೊರ ತಂದಿದ್ದ, ಏಕೀಕರಣ ಹೋರಾಟಗಾರರೆಲ್ಲರ ರೇಖಾಚಿತ್ರಗಳೂ ಇದ್ದ ಸಮಗ್ರ ಕೃತಿ ಸಂಪಾದನೆಯು, ಆಗ ಸಾರ್ವಜನಿಕರಿಗೆ ಲಭ್ಯವಿದ್ದದ್ದು ಈ ಕೃತಿ ಒಂದೇ ಒಂದೆಂಬ ಸತ್ಯ ತಿಳಿದು ಅವಕ್ಕಾದ ದಿನಗಳವು"[೪] ಎಂದು ಕೆ. ಸುಚೇಂದ್ರ ಪ್ರಸಾದ ಅವರು ಅಚ್ಚರಿಪಡುವುದು ಹಾಗೂ ೨೦೦೬ರಲ್ಲಿ ಕರ್ನಾಟಕ ರಾಜ್ಯೋತ್ಸವದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ದುಡಿದ ಮಹನೀಯರಿಗೆ ಪ್ರಶಸ್ತಿ ನೀಡಲು ಇದೇ ಕೃತಿಯನ್ನು ಅವಲಂಬಿಸಿದ್ದು ಈ ಕೃತಿಯ ಅನನ್ಯತೆಗೆ ನಿದರ್ಶನ.

ಈ ಕೃತಿಯ ಪ್ರಾರಂಭದಲ್ಲಿ 'ನಾಲ್ಕು ಅಭಿಪ್ರಾಯಗಳು' ಎಂಬ ತಲೆಬರಹದಲ್ಲಿ ನಾಡಿನ ಶ್ರೇಷ್ಠ ವಿದ್ವಾಂಸರುಗಳಾದ ಎಂ.ಎಂ.ಕಲಬುರ್ಗಿ, ಹಾ.ಮಾ.ನಾಯಕ, ವ್ಯಾಸರಾಯ ಬಲ್ಲಾಳ ಮತ್ತು ಕು.ಶಿ ಹರಿದಾಸಭಟ್ಟ ಅವರ ಈ ಕೃತಿಯ ಕುರಿತಾದ ಅಭಿಪ್ರಾಯಗಳನ್ನು ದಾಖಲಿಸಲಾಗಿದ್ದು, ಈ ಕೃತಿಗೆ ಪ್ರವೇಶಿಕೆಯನ್ನು ಒದಗಿಸುವ ಮೂಲಕ ಓದುಗರು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಕರ್ನಾಟಕ ಏಕೀಕರಣದ ಪ್ರಾಮಾಣಿಕ ಇತಿಹಾಸ ತಿಳಿಸಬೇಕೆಂಬ ಕಾರಣಕ್ಕೆ ಸಾಕಷ್ಟು ಸಮಯ ತೆಗೆದುಕೊಂಡು ಹೋರಾಟದ ಭಾಗವಾಗಿದ್ದವರನ್ನು, ಹತ್ತಿರದಿಂದ ಕಂಡವರನ್ನು ಸಂದರ್ಶಿಸಿ ಅವರಿಂದ ಸತ್ಯ ಅಥವಾ ಸತ್ಯಕ್ಕೆ ಹತ್ತಿರವಾದ ಮಾಹಿತಿಗಳನ್ನು ಸಂಗ್ರಹಿಸಿ, ಸಾಕಷ್ಟು ಅಧ್ಯಯನ ನಡೆಸಿ ಈ ಕೃತಿಯನ್ನು ರಚಿಸಲಾಗಿದೆ. ಒಬ್ಬರಿಂದ ಇಷ್ಟೆಲ್ಲ ಕೆಲಸ ಕಷ್ಟಸಾಧ್ಯವೆಂದೇ ಸಮಿತಿಯೊಂದನ್ನು ರಚಿಸಿ,

ಸದಸ್ಯರ ನೆರವಿನಿಂದ ಈ ಎಲ್ಲಾ ಕಾರ್ಯಗಳನ್ನು ನಿರ್ವಹಿಸಿರುವುದರಿಂದ ಮಾತ್ರ ಇಂತಹ ಉತ್ಕೃಷ್ಟ ಕೃತಿ ರಚಿಸಲು ಸಾಧ್ಯವಾಗಿದೆ.

ಈ ಕೃತಿಯನ್ನು ಹೊರತಂದು ಸಮಾರು ೨೦ ವರ್ಷಗಳು ಸಂದಿದ್ದರೂ ಇದಕ್ಕೆ ಸಮಾನಾದ ಏಕೀಕರಣದ ಇತಿಹಾಸಕ್ಕೆ ಸಂಬಂಧಿಸಿದ ಬೇರೊಂದು ಕೃತಿ ಬಂದಿಲ್ಲದಿರುವುದು ಈ ಕೃತಿಯ ಮಹತ್ತಿಗೆ ಸಾಕ್ಷಿ. ನಮ್ಮ ಕನ್ನಡನಾಡಿನ ಗತಕಾಲದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸ ತಿಳಿಸದೆ ಕೇವಲ ಏಕೀಕರಣ ಚಳವಳಿಯ ಬಗ್ಗೆ ತಿಳಿಸಿದರೆ ಇಂದಿನ ಪೀಳಿಗೆಗೆ ಏಕೀಕರಣ ಚಳವಳಿಯ ಮಹತ್ವದ ಅರಿವಾಗುವುದಿಲ್ಲ ಎಂಬ ಕಾರಣದಿಂದ ಕರ್ನಾಟಕ ಏಕೀಕರಣ ಇತಿಹಾಸದ ಬಗ್ಗೆ ಹೇಳಹೊರಟಿರುವ ಈ ಕೃತಿಯನ್ನು ಕೇವಲ ಏಕೀಕರಣದ ಹೋರಾಟ ತಿಳಿಸಲು ಮಾತ್ರ ಸೀಮಿತಗೊಳಿಸದೆ, ಪ್ರಾಗಿತಿಹಾಸ ಕಾಲದಿಂದ ಪ್ರಾರಂಭಿಸಿ ಇತಿಹಾಸ ಕಾಲದಲ್ಲಿ ಕನ್ನಡನಾಡನ್ನು ಆಳಿದ ರಾಜವಂಶಗಳ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನೂ ತಿಳಿಸಿದ್ದಾರೆ. ಹಾಗೂ ಏಕೀಕೃತಗೊಂಡ ನಂತರದ ಕರ್ನಾಟಕದ ಸ್ಥಿತಿಗತಿಗಳ ಬಗ್ಗೆಯೂ ವಿಮರ್ಶಾತ್ಮಕವಾಗಿ ಚರ್ಚಿಸಿದ್ದಾರೆ. ಹಾಗಾಗಿ ಓದುಗರು ಕರ್ನಾಟಕದ ಪ್ರಾಚೀನ ಇತಿಹಾಸದ ಜೊತೆಗೆ ಪ್ರಸ್ತುತ ಕರ್ನಾಟಕದ ಸ್ಥಿತಿಗತಿಗಳ ಸ್ಥೂಲಚಿತ್ರಣವನ್ನು ಈ ಕೃತಿಯೊಂದರಿಂದಲೇ ಪಡೆಯಬಹುದು.

“ಇದು ಕೇವಲ ಇತಿಹಾಸದ ಕೃತಿಯಾಗಿ ಉಳಿಯದೆ, ವರ್ತಮಾನದ ಕೃತಿಯಾಗಿಯೂ ಬೆಳೆದಿದೆ; ಚರಿತ್ರೆಗೆ ಇಲ್ಲಿ ಚಲನಶೀಲತೆ ಪ್ರಾಪ್ತವಾಗಿದೆ.”[೪] ಏಕೆಂದರೆ ಕರ್ನಾಟಕದ ಪ್ರಾಚೀನ ಇತಿಹಾಸವನ್ನು ತಿಳಿಸುವ ಮೂಲಕ ಕನ್ನಡ ನಾಡು ಮತ್ತು ಸಂಸ್ಕೃತಿ ಎಷ್ಟೊಂದು ಪ್ರಾಚೀನ, ಸಮೃದ್ಧ ಮತ್ತು ವಿಸ್ತಾರವಾದ ವ್ಯಾಪ್ತಿಯನ್ನು ಹೊಂದಿತ್ತು, ನಮ್ಮವರ ನಡುವಿನ ಐಕ್ಯತೆಯ ಕೊರತೆ ಮತ್ತು ಅಸೂಯೆಯ ಲಾಭ ಪಡೆದು ಹೊರಗಿನಿಂದ ಬಂದ ಬ್ರಿಟೀಷರು ನಮ್ಮ ಮೇಲೆ ತಮ್ಮ ಅಧಿಕಾರ ಸ್ಥಾಪಿಸುವ ಮೂಲಕ ತಮ್ಮ ಅನುಕೂಲಕ್ಕಾಗಿ ಕನ್ನಡ ಭಾಷಿಕ ಪ್ರದೇಶಗಳನ್ನು ಹರಿದು ಹಂಚಿ ಹೋಗುವಂತೆ ಮಾಡಿದುದರಿಂದ ಕನ್ನಡಿಗರು ಎಷ್ಟೆಲ್ಲ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಹೀಗೆ ಹರಿದು ಹಂಚಿ ಹೋದ ಕರ್ನಾಟಕವನ್ನು ಏಕೀಕರಣಗೊಳಿಸಲು ಎಷ್ಟೊಂದು ಹೋರಾಟ ಮಾಡಬೇಕಾಯಿತು ಎಂಬುದನ್ನು ಮುಂದಿನ ಪೀಳಿಗೆಗೆ ಮನವರಿಕೆ ಮಾಡಿಸಿ, ಇತಿಹಾಸದಿಂದ ಪಾಠ ಕಲಿಯುವಂತೆ ಮಾಡುವುದು ಮತ್ತು ಏಕೀಕರಣಕ್ಕಾಗಿ ಹೋರಾಡಿದ ಮಹನೀಯರನ್ನು ಸ್ಮರಿಸುವ ಜೊತೆಗೆ ಮುಂದಿನ ಪೀಳಿಗೆಗೆ ಅವರನ್ನು ಪರಿಚಯಿಸುವ ಮೂಲಕ ಅವರಲ್ಲಿ ನಾಡು–ನುಡಿಯ ಬಗ್ಗೆ ಅಭಿಮಾನ ಮೂಡಿಸಿ, ಹಲವು ಮಹನೀಯರು ಹೋರಾಟ ಮಾಡಿ ಗಳಿಸಿಕೊಟ್ಟ ನಮ್ಮ ನಾಡನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕಾದ ಅಗತ್ಯತೆಯನ್ನು ಮನವರಿಕೆ ಮಾಡಿಸುವಲ್ಲಿ ಈ ಕೃತಿಯು ಯಶಸ್ವಿಯಾಗುತ್ತದೆ.

**ಕೊನೆಟಿಪ್ಪಣಿಗಳು**

೧. ಪು.೧೬, ನವಕರ್ನಾಟಕದ ಬಂಧುವಾಗಿ ಎಚ್.ಎಸ್. ಗೋಪಾಲರಾವ್, ಸಿ.ಆರ್. ಕೃಷ್ಣರಾವ್, ಎ. ರಮೇಶ ಉಡುಪ, ಬಹುಮುಖಿ, ಪ್ರ. ಸಂ. ಡಾ. ಡಿ.ವಿ. ಪರಮಶಿವಮೂರ್ತಿ

೨. ಪು.೩೧,ವಿದ್ವತ್‌ಲೋಕದ ಧ್ರುವತಾರೆ:ಡಾ.ಎಚ್.ಎಸ್.ಗೋಪಾಲರಾವ್, ಡಾ.ಎಂ.ಜಿ. ಮಂಜುನಾಥ, ಹೊಸತು, ಸಂ. ಸಿದ್ಧನಗೌಡ ಪಾಟೀಲ,

೩. ಪು.೫೫ ಕೆ. ಉದ್ಧರೇದಾತ್ಮನಾತ್ಮಾನಮ್ ನಾತ್ಮಾನಮವಸಾದಯೇತ್, ಸುಚೇಂದ್ರ ಪ್ರಸಾದ, ಬಹುಮುಖಿ, ಪ್ರ. ಸಂ. ಡಾ. ಡಿ.ವಿ. ಪರಮಶಿವಮೂರ್ತಿ

೪. ಪು.೬, ನಾಲ್ಕು ಅಭಿಪ್ರಾಯಗಳು, ಎಂ.ಎಂ.ಕಲ್ಬುರ್ಗಿ, ಕರ್ನಾಟಕ ಏಕೀಕರಣ ಇತಿಹಾಸ, ಎಚ್.ಎಸ್. ಗೋಪಾಲರಾವ್

**ಆಕರ ಕೃತಿ**

೧. ಕರ್ನಾಟಕ ಏಕೀಕರಣ ಇತಿಹಾಸ, ಎಚ್.ಎಸ್. ಗೋಪಾಲರಾವ್, ನವಕರ್ನಾಟಕ ಪ್ರಕಾಶನ, ೨೦೨೦

**ಪರಾಮರ್ಶನ ಗ್ರಂಥಗಳು**

೧. ಬಹುಮುಖಿ, ಪ್ರ.ಸಂ. ಡಾ. ಡಿ.ವಿ. ಪರಮಶಿವಮೂರ್ತಿ, ಎಚ್.ಎಸ್. ಗೋಪಾಲರಾವ್ ಅಭಿನಂದನಾ ಸಮಿತಿ, ೨೦೨೪

೨. ಸೃಜನಶೀಲ, ಪ್ರ. ಸಂ. ಎನ್.ಜಿ. ಗೋಪಾಲ್, ಡಾ. ಗೋಪಾಲರಾವ್ ನುಡಿನಮನ ವೇದಿಕೆ, ನೆಲಮಂಗಲ, ೨೦೨೪

೩. ಹೊಸತು, ನವೆಂಬರ್ ೨೦೨೪, ಸಂ. ಸಿದ್ಧನಗೌಡ ಪಾಟೀಲ, ನವಕರ್ನಾಟಕ ಪ್ರಕಾಶನ